**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್ ಸಿ, ಮೂಡಬಿದ್ರೆ ದ.ಕ.**

| | | |
|---|---|---|
| ಹೆಸರು | : | ಪದ್ಮಿಣಿ ಪೈ |
| ತಂದೆಯ ಹೆಸರು | : | ಪುಂಡಲೀಕ ಪೈ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಮೂಡಬಿದ್ರೆ |

ಸಾಕ್ಷಿದಾರರನ್ನು ದಿಃ 10.03.2026 ರಂದು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯ ಸರ್ಕಾರಿ ಅಭಿಯೋಜಕರಿಂದ**

ಆರೋಪಿ 1 ಗೊತ್ತು. ಆರೋಪಿ 2 ನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ 2 ನೇ ಆರೋಪಿ ಗೈರು ಹಾಜರಾಗಿದ್ದು ಅವರನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಚಾಸಾ-2 ಗೊತ್ತಿರುತ್ತದೆ. ಚಾಸಾ-3 ನನ್ನ ನೆರೆಕರೆಯವರು. ಚಾಸಾ-4 ನನ್ನ ಅಳಿಯ. ಚಾಸಾ-5 ನನ್ನ ಮಗಳು.

ದಿನಾಂಕ 13.02.2024 ರಂದು ಮಧ್ಯಾಹ್ನ 2.30 ಗಂಟೆಗೆ ನಾನು ನಮ್ಮ ಮನೆಯಲ್ಲಿ ಒಬ್ಬಳೇ ಇದ್ದಾಗ 1 ನೇ ಆರೋಪಿ ಮತ್ತು ಅವರ ಪತ್ನಿ 2 ನೇ ಆರೋಪಿ ಕೊಲೆ ಬೆದರಿಕೆಯನ್ನು ನಮ್ಮ ಮನೆಗೆ ಬಂದು ಹಾಕಿರುತ್ತಾರೆ. ಆ ನಂತರ ಬಾಯಿಗೆ ಬಂದಂತೆ ನನ್ನನ್ನು ಬೈದು ಕೈಯಿಂದ ಹೊಡೆದು ನನ್ನ ತಲೆಯ ಜುಟ್ಟನ್ನು ಹಿಡಿದು ದೂಡಿ ಹಾಕಿರುತ್ತಾರೆ. ನನ್ನ ಮಗಳು ಮತ್ತು ಅಳಿಯ 1 ನೇ ಆರೋಪಿಯನ್ನು ಚಾಲಕನಾಗಿ ಕೆಲಸಕ್ಕೆ ನೇಮಿಸಿದ್ದರು. 1 ನೇ ಆರೋಪಿಯ ಬಳಿ ಹಣವನ್ನು ಕೇಳಿರುವ ವಿಚಾರವಾಗಿ ಗಲಾಟೆಯನ್ನು ಮಾಡಿರುತ್ತಾರೆ. ನಾನು 15 ನೇ ತಾರೀಖಿಗೆ ದೂರನ್ನು ನೀಡಿರುತ್ತೇನೆ. ಆ ದೂರನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಪೋಲಿಸರು 15 ನೇ ತಾರೀಖಿಗೆ ಸ್ಥಳಕ್ಕೆ ಬಂದಿರುತ್ತಾರೆ. ಆಗ ಚಾಸಾ-6 ಮತ್ತು 7 ರವರು ಸ್ಥಳದಲ್ಲಿ ಹಾಜರಿದ್ದರು. ಪೋಲಿಸರು ಸ್ಥಳಕ್ಕೆ ಬಂದು ಬರವಣಿಗೆ ಮಾಡಿಕೊಂಡು ಹೋಗಿರುತ್ತಾರೆ. ಈಗ ನೋಡುತ್ತಿರುವ

ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ತಕ್ಷೀರು ಸ್ಥಳದ ಮಹಜರು ಆಗಿದ್ದು ಅದನ್ನು ನಿಪಿ–2 ಎಂದು ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಪೋಲಿಸರು ಸ್ಥಳಕ್ಕೆ ಬಂದಾಗ ತಕ್ಷೀರು ಸ್ಥಳವನ್ನು ಅವರಿಗೆ ನಾನೇ ತೋರಿಸಿರುತ್ತೇನೆ.

**ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತೀಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸ.ಸ.ಅರವರು ಮನವಿ ಮಾಡಿದ್ದು ಮನವಿಯನ್ನು ಪುರಸ್ಕರಿಸಲಾಯಿತು.**

**ಪಾಟೀ ಸವಾಲು : ಸ.ಸ.ಅ ರವರಿಂದ**

ಆರೋಪಿತರು ಅವ್ಯಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆರೋಪಿತರು ನಮ್ಮ ಅಂಗಳಕ್ಕೆ ಅಕ್ರಮ ಪ್ರವೇಶ ಮಾಡಿದ್ದರು ಎಂದರೆ ಸರಿ.

***ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸೂಕ್ತ ಕಾರಣ ಇಲ್ಲದ್ದರಿಂದ ಮನವಿಯನ್ನು ತಿರಸ್ಕರಿಸಲಾಯಿತು ಮತ್ತು ಸಾಕ್ಷಿಯ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.***

**ಮರು ವಿಚಾರಣೆಃ ಇಲ್ಲ**

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನಂದತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

ಸಹಿ/-

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಮೂಡಬಿದ್ರೆ. (C/c)